International Journal of Applied Research 2014; 1(1): 369-370




**ISSN Print:** 2394-7500
**ISSN Online:** 2394-5869
**Impact Factor:** 3.4
IJAR 2014; 1(1): 369-370
www.allresearchjournal.com
Received: 11-11-2014
Accepted: 17-12-2014

**ಪ್ರೊ. ಸಿದ್ದಣ್ಣ ಪಿ. ಬೀಡಗೊಂಡ**
ಕನ್ನಡ ಸಹ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಬಸವನ-ಬಾಗೇವಾಡಿ, ಜಿಲ್ಲೆ:ಬಿಜಾಪುರ, ಕರ್ನಾಟಕ, ಭಾರತ

**Correspondence**
**ಪ್ರೊ. ಸಿದ್ದಣ್ಣ ಪಿ. ಬೀಡಗೊಂಡ**
ಕನ್ನಡ ಸಹ ಪ್ರಾಧ್ಯಾಪಕರು, ಸರಕಾರಿ ಪ್ರಥಮ ದರ್ಜೆ ಕಾಲೇಜು, ಬಸವನ-ಬಾಗೇವಾಡಿ, ಜಿಲ್ಲೆ:ಬಿಜಾಪುರ, ಕರ್ನಾಟಕ, ಭಾರತ

# ಸಾಹಿತ್ಯದ ಅಭಿರುಚಿ ಮತ್ತು ಮಕ್ಕಳ ಸವಾಲುಗಳು

**ಪ್ರೊ. ಸಿದ್ದಣ್ಣ ಪಿ. ಬೀಡಗೊಂಡ**

ಮಕ್ಕಳ ಸಾಹಿತ್ಯದ ಅಂದೊಡನೆ ಮೂಗು ಮುರಿಯವವರೇ ಹೆಚ್ಚು ಅದೇನು ಕಾರಣವೂ ಗೊತ್ತಿಲ್ಲ. ನಮ್ಮ ಹಿರಿಯ ಲೇಖಕರು ಮಕ್ಕಳ ಸಾಹಿತ್ಯವನ್ನು ಅಸ್ಪ್ರ್ಯಶ್ಯ ಎನ್ನುವ ಮಟ್ಟಿಗೆ ನೋಡುತ್ತಿದ್ದಾರೆ. ಈಗ ಹಿರಿಯರಾದವರು ತಾವೂ ಮಕ್ಕಳಾಗಿದ್ದೆವು ಎಂಬುವುದನ್ನು ಮರೆತುಬಿಟ್ಟಿದ್ದಾರೆ. ಅದಕ್ಕೆ ಕಾರಣ ಈಗ ಅವರು ದೊಡ್ಡ ಲೇಖಕರಾಗಿರುವುದು. ಇಂದಿನ ಮಕ್ಕಳೇ ನಾಳಿನ ನಾಯಕರು ಎನ್ನುವ ಮಾತಿನಂತೆ ಯಾವ ವಯಸ್ಸಿನ ಕಲಿಕೆಗೆ ಎನನ್ನೂ ಕೊಡಬೇಕು ಅದನ್ನು ಕೊಡಬೇಕಾಗುತ್ತದಯಲ್ಲವೇ?. ಹೀಗಾಗಿ ಮಕ್ಕಳ ಸಾಹಿತ್ಯಕ್ಕಾಗಿ ಯಾವ ರೀತಿಯ ಪಠ್ಯಕ್ರಮ ರಚನೆ ಮಾಡಬೇಕೆಂಬುದು ಒಂದು ಸವಾಲು ಹೌದು ಮತ್ತು ಸಮಸ್ಯವು ಹೌದು.

ನವೋದಯ ಮತ್ತು ನವೋದಯ ಪೂರ್ವದ ಕಾಲದ ಸಂದರ್ಭದಲ್ಲಿ ಇಂಥ ಪೂರ್ವಾಗ್ರಹ ಪೀಡಿತ ಮನೋಭಾವಗಳು ಹಿರಿಯ ತಲೆಮಾರಿನ ಲೇಖಕರಲ್ಲಿ ಬೇರೋರಿರಲ್ಲ. ಅಂತಯೇ ಜಿ.ಪಿ. ರಾಜರತ್ನಂ, ಹೊಯ್ಸಳ, ವೇವುಂಡಿ, ಕುವೆಂಪು, ಪಂಜೆಮಂಗೇರಾಯ, ದ.ರಾ.ಬೇಂದ್ರೆ, ಸಿದ್ದಯ್ಯ ಪುರಾಣಿಕ, ಶಿವರಾಮ ಕಾರಂತ ಮಾಸ್ತಿ ವೆಂಕಟೇಶ ಅಯ್ಯಾಂಗಾರ ಹೀಗೆ ಮುಂತಾದವರು ಮಗುವಿನ ಆಸಕ್ತಿಯ ಕುರಿತಾಗಿ ಆ ಕಾಲಕ್ಕೆ ಬೇಕಾಗಿರುವ ತಮ್ಮ ಕಣ್ಮುಂದೆ ಕಾಣುವ ಅನುಭವಿಸಿದ ಅನುಭವಗಳು ಮಕ್ಕಳ ಕವಿತೆಯಾಗಿ/ಕತೆಯಾಗಿ/ಕತನಕವಿತೆಗಳಾಗಿ ಬರೆದು ಮಕ್ಕಳಿಗೆ ಮನದುಂಬಿ ಉಣಬಡಿಸಿ ಸಾಹಿತ್ಯ ಸೇವೆ ಗೈದಿದ್ದಾರೆ. ಎರಡನೆ ತಲೆಮಾರಿನ ಶಂ. ಗು, ಬಿರಾದರ 'ಸಿಸು' ಸಂಗಮೇಶ. ಸತ್ಯರ್ಥೀ ಚನ್ನವೀರಕಣವಿ ದಿನಕರ ದೇಸಾಯಿ ಕಂಚ್ಯಾಣಿ ಶರಣಪ್ಪ, ಈಶ್ವರ ಕಮ್ಮಾರ, ಬಿ.ಎ.ಸನದಿ, ರಾಘವ ಪಳಕಳ, ಸೀತಾರಾಮ ಭಟ್ಟರು ಹೀಗೆ ಎರಡೆನೆಯ ತಲೆಮಾರಿ ಲೇಖಕರು ಕೂಡಾ ಸಾಹಿತ್ಯದ ಸೇವೆಗೈದಿದ್ದಾರೆ. ನಾ ಡಿಸೋಜಾ, ಫ.ಗು. ಸಿದ್ದಾಪೂರ, ಚಂದ್ರಕಾಂತ ಕರದಳ್ಳಿ, ಜಂಬುನಾಥ ಕಂಚ್ಯಾಣಿ, ಆನಂದ ಪಾಟೀಲ, ಎ,ಕೆ. ರಾಮೇಶ್ವರ, ಮುಂತಾದವರು ಮೂರನೆಯ ತಲೆಮಾರಿಗೆ ಬಂದವರು. ಇಲ್ಲೇ ಅನೇಕರ ಹೆಸರುಗಳನ್ನು ಪ್ರಸ್ತಾಪಿಸಬಹುದಾದರು ಅವರಿವರ ಹೆಸರುಗಳನ್ನು ಇಲ್ಲಿ ಉಲ್ಲೇಖಿಸಲಲು ಹೋಗುವದಿಲ್ಲ. ನೂರಾರು ಕವಿಗಳು ಮಕ್ಕಳ ಸಾಹಿತ್ಯದ ಕೃಷಿಯನ್ನು ಹುಲುಸಾಗಿ ಬೆಳೆಸಿದ್ದಾರೆ. ಬೆಳಗಿಂತ ಇಲ್ಲಿ ಕಳೆಯೇ ಹೆಚ್ಚಾಗಿದೆ. ಮಕ್ಕಳ ಸಾಹಿತ್ಯ ಎನ್ನುವುದು ಪುಸ್ತಕದ ಹಾಳೆಗಳಲ್ಲಿ ಅಲ್ಲ. ಸಾಹಿತ್ಯ ಮಕ್ಕಳ ನಾಲಗೆಯ ಮೇಲೆ ನಲಿಯಬೇಕಾಗಿದೆ ಅಲ್ಲವೇ? ಅದು ಸಾಹಿತ್ಯದ ಶ್ರೀಮಂತಿಕೆಯ ಹೆಗ್ಗಳಿಕೆ. ಇದು ಯಾವಾಗ ಸಾಧ್ಯವೆಂದರೆ ನಮ್ಮ ಮಕ್ಕಳ– ಕವಿಗಳ ಕವಿತೆಗಳನ್ನು ಕತೆಗಳನ್ನು ಪುಸ್ತಕಗಳಲ್ಲಿ ದಾಖಲಿಸಬೇಕು.

ಪ್ರತಿ ಮೂರುವರ್ಷಕ್ಕೊಮ್ಮೆ ಇಲ್ಲವೇ ಐದು ಅಥವಾ ಆರು ವರ್ಷಕ್ಕೊಮ್ಮೆಯಾದರೂ ಪಠ್ಯ ಪುಸ್ತಕಗಳು ಹೊಸದಾಗಿ ಬರಬೇಕು. ರಚನಾ ಸಮಿತಿಯ ಸದಸ್ಯರು ಬೇರೆ ಬೇರೆ ಸ್ಥಳಗಳಿಂದ ಬಂದವರಿರಬೇಕು. ಆಧ್ಯಕ್ಷರು, ಸದಸ್ಯರು, ಸಂಚಾಲಕರು ಎಂದರೆ ಕಾಲಕಾಲಕ್ಕೂ ಇದ್ದವರೇ ವಕ್ಕರಿಸ ಕೂಡದು. ಪಠ್ಯ ಪುಸ್ತಕ ರಚನೆಯ ರೂಪು ರೇಷೆಗಳನ್ನು ಸಿದ್ದಪಡಿಸಿವ ಸಂದರ್ಭದಲಿ ಪ್ರತಿ ಜಿಲ್ಲೆಯಿಂದ ಆಯಾ ತಾಲೂಕುಗಳಲ್ಲಿ ಮಕ್ಕಳ ಸಾಹಿತ್ಯ, ಶಿಕ್ಷಣದಲ್ಲಿ ಆಸಕ್ತಿ ಇರುವವರು ಅನೇಕ ಶಿಕ್ಷಕರು, ವಿದ್ವಾಂಸರು, ಸಾಹಿತಿಗಳ ಪಟ್ಟಿಯನ್ನು ಬೇರೆ ಬೇರೆ ಜಿಲ್ಲೆಗಳಿಂದ ಸಂಗ್ರಹಿಸಿ ರಾಜ್ಯಮಟ್ಟದಲ್ಲಿ ಒಂದು ಪಟ್ಟಿಯನ್ನು ಸಿದ್ದಪಡಿಸಿಕೊಂಡು ಒಂದು ಕಾರ್ಯಗಾರವನ್ನು ಏರ್ಪಡಿಸಿ ಪಠ್ಯಪುಸ್ತಕಗಳಲ್ಲಿ ತರಗತಿವಾರು ಎಂಥೆಂಥ ಕವಿತೆ, ಕಥೆ, ಕಥನ ಗೀತೆ, ಹೀಗೆ ಹಲವು ವಿಷಯಗಳ ಕುರಿತು ವಿಶ್ರುತ ಚೆರ್ಚೆಯಾಗುವುದರ ಮೂಲಕ ಪಠ್ಯ ಕ್ರಮವನ್ನು ಸಿದ್ದ ಪಡಿಸಬೇಕು.

ಕತೆ, ಕವಿತೆ, ಕಥನ ಗೀತೆ, ಕವನ, ನಾಟಕಗಳೂ, ಒಗಟುಗಳು ಹಲವು ಪ್ರಕಾರದ ಸಾಹಿತ್ಯದ ರೂಪಗಳು ನಮ್ಮಲ್ಲಿ ಬಹಳಷ್ಟು ಬೆಳದು ಬಂದಿವೆ.

ಹಳೆಯ ಬೆಳಸಿನ ಜೊತೆ ಹೊಸ ಬೆಳೆಸು ಬಂದು ಸೇರ್ಪಡೆಯಾಗಿದೆ. ನವೋದಯ ಕಾಲದ ಸಾಹಿತ್ಯ ರಚನೆಗೂ ಇಂದು ರಚನೆಯಾಗಬೇಕಾದ ಸಾಹಿತ್ಯ ಪಠ್ಯಕ್ಕೂ ಅಜಗಜಾಂತರ ವ್ಯತ್ಯಾಸವಾಗುತ್ತಿರುವುದನ್ನು ನಾವು ಕಾಣುತ್ತಿದ್ದವೆ. ನವೋದಯ ಕಾಲದ ರಮ್ಯತೆ, ನಿಸರ್ಗ, ಪ್ರಿಯತೆ, ಕಣ್ಣು ಮುಂದೆ ಕಾಣಬರುವ ವಿದ್ಯಮಾನಗಳನ್ನು ಬಳಸಿಕೊಂಡು ಸಾಹಿತ್ಯ ರಚನೆಯಾಗುತ್ತಿದ್ದು, ಸ್ತುತ್ಯಾರ್ಹವಾಗಿ ಸಾರ್ಥಕವಾಗಿ ಮೂಡಿಬಂದಿದ್ದು ನೋಡಿದೊಡನೆ ತಟ್ಟನೆ ಮಗುವಿನ ಮನಸ್ಸನ್ನು ಸೆಳೆಯುವಲ್ಲಿ ಕುತೂಹಲ ಆಸಕ್ತಿ ಹುಟ್ಟಿಸುವಲ್ಲಿ ಸಫಲವಾಗಿದೆ ಎಂಬುವುದರಲ್ಲಿ ಎರಡು ಮಾತಿಲ್ಲ. ಆದರು ಸಹ ಮಕ್ಕಳ ಮನಸ್ಸಿನ ಮೇಲೆ ಪರಿಣಾಮಕಾರಿಯಾದ ಮತ್ತು ಕುತುಹಲ ಕೆರಳಿಸುವಂತಹ ಪಠ್ಯಕ್ರಮ ಇನ್ನು ಮುಂದೆ ಹೆಚ್ಚು ಹೆಚ್ಚು ಮಕ್ಕಳ ಮನ ಮುಟ್ಟುವ ಸಾಹಿತ್ಯ ಬರುವುದು ಅವಶ್ಯಕವಾಗಿದೆ.

ನವ್ಯ ಕಾಲದ ನಿಸರ್ಗ ವರ್ಣನೆ ಸೂರ್ಯೋದಯ, ಚಂದ್ರೋದಯ, ನದಿಯ ಹರಿವು, ಆಕಾಶ, ನಕ್ಷತ್ರ, ಚಂದಾಮಾಮ, ಹೂ, ಪಕ್ಷಿಗಳು, ಕೀಟಗಳು, ದುಂಬಿ ಮುಂತಾದವು ರಮ್ಯತೆಯಲ್ಲಿ ಮೂಡಿಬಂದು ಮಕ್ಕಳ ಮನಕ್ಕೆ ಮುದನೀಡುವಲ್ಲಿ ಯಶಸ್ಸನ್ನು ಕಂಡವು. ಮಕ್ಕಳ ಸಾಹಿತ್ಯ ಅಥವಾ ಸಾಹಿತ್ಯ ಅಂದರೆ ಮತ್ತೇನೂ ಬೇರೇನೂ ಅಲ್ಲ. ಮಮ್ಮ ಕಣ್ಮುಂದೆ ನಡೆಯುವ ವಿದ್ಯಾಮಾನಗಳು ಘಟನೆಗಳು ಉಪಯೋಗಿಸುವ ವಸ್ತುಗಳು ಆಕರವಾದ ಸಂಗತಿಗಳು ಮುಂತಾದವುಗಳನ್ನು ನೋಡಿದ ಲೇಖಕ ತನ್ನ ಮನದ ಅಚ್ಚಿನಲ್ಲಿ ಎರಕದ ಸಿದ್ದ ಮಾದರಿಯನ್ನು ಕಟ್ಟಿಕೊಂಡುತ್ತಿದ್ದ. ಉದಾ: ಕರಡಿಯ ಕುಣಿತ, ಮಂಗನ ಆಟ, ಹಾವಿನ ಆಟ, ಸರ್ಕಸ್‌ನಲ್ಲಿ ಹುಲಿ, ಆನೆ, ಕೋತಿ, ಒಂಟಿ ಮುಂತಾದವುಗಳನ್ನು ತೋರಿಸುತ್ತುದ್ದರು. ಆದರೆ ಆ ಕಾಲಕ್ಕೆ ಅದು ಸರಿಯಾಗಿತ್ತು ಇಂದು ಕರಡಿಯನ್ನು ಕುಣಿಸಿದರೆ ಕೋತಿಯನ್ನು ಹಿಂಸಿಸಿದರೆ, ಹಾವನ್ನು ಆಡಿಸಿದರೆ ಪ್ರಾಣಹಿಂಸೆ ಎಂಬ ಕಾನೂನು ಅಡ್ಡಬಂದು ಆಟಗಳೆಲ್ಲ ನೇಪಥ್ಯಕ್ಕೆ ಸರಿದಿವೆ. ನಂತರದಲ್ಲಿ ಪೋತರಾಜರು, ದುರಗಿಮುರಗೀ, ಜೋಕುಮಾರ, ಮುಂಬೈ ತಾರೀಫು, ಡೊಂಬರ ಆಟದವರು, ಗರದಿ ಗಮ್ಮತ್, ಮುಂತಾದವರು ಈ ವೃತ್ತಿಗಳಿಂದಲೂ ದೂರ ಸರಿಯುತ್ತಿದ್ದಾರೆ.

ಇಂದು ನಮ್ಮ ಮಕ್ಕಳು ಇವುಗಳಿಂದ ವಂಚಿತರಾಗಿದ್ದಾರೆ. ಕಾರಣ ಕಾಲಮಾನದ ಪಲ್ಲಟ ಶಿಕ್ಷಣ ಸಾರ್ವತ್ರೀಕರಣ ವಿಭಕ್ತ ಕುಟುಂಬಗಳು ಪಟ್ಟಣಕ್ಕೆ, ವಲಸೆ, ವೈಜ್ಞಾನಿಕ ಅವಿಷ್ಕಾರ, ಕ್ರೀಡೆಗಳಲ್ಲಿ ಬದಲಾವಣೆ ಹಳ್ಳೀ ಆಟಗಳ ಬದಲಿ ಆಧುನಿಕ ಕ್ರೀಡೆಗಳು ಭಾವಿಗಳ ಬದಲಿಗೆ ಈಜು ಕೊಳಗಳು ಹೊಲದ ಬದಲಿಗೆ ಉದ್ಯಾನ ಕಾಲು ನಡಿಗೆ ಬದಲಿಗೆ ಬೈಕುಗಳೂ ನಾಟಕ ಬಯಲಾಟಗಳ ಬದಲಿಗೆ ಸಿನಿಮಾಗಳೂ, ಸಿನೆಮಾಗಳೂ ಬಲದಲಿಗೆ ದೂರದರ್ಶನದ ಕಾರ್ಯಕ್ರಮಗಳೂ ಪುಸ್ತಕಗಳ ಬದಲಿಗೆ ಆಡಿಯೋ ವಿಡಿಯೋಗಳೂ, ಖಾನಾವಳಿಗಳು ಬದಲಿಗೆ ಮೆಸ್ಸುಗಳೂ ಮನೆ ವಾಸಗಳ ಬದಲಿಗೆ ಹಾಸ್ಟಲೆಗಳು ಈ ಪಟ್ಟಿ ಹೀಗೆಯೆ ಬೆಳೆಯುತ್ತಾ ಹೊಗುತ್ತದೆ. ಕಾಲದ ನಡೆಯ ಪರಿಣಾಮ ಊಟ, ಆಟ, ಬಟ್ಟೆ, ಭಾಷೆ ಮುಂತಾದಾವುಗಳ ಮೇಲೆ ಗಾಡವಾದ ಪ್ರಭಾವ ಬೀರುತಲ್ಲಿದೆ ಅದರ ಜೋತಗೆ ನಾವು ಹೆಜ್ಜೆ ಹಾಕಲೇಬೇಕೆಲ್ಲವೆ?

ಜಗತ್ತು ಇಂದು ಚಿಕ್ಕದಾಗಿದೆ. ಕುಳಿತಲ್ಲಿಂದಲೆ ಜಗದ ವಿದ್ಯಮಾಗನಗಳಳೂ ಕ್ಷರ್ಣರ್ಧದಲ್ಲಿ ಲಭ್ಯವಾಗುತ್ತಲಿವೆ ನಮ್ಮ ಮಕ್ಕಳೂ ಬಳಸುತ್ತಿರುವ ಮೋಬೈಲ್‌ಗಳು ಮಿಂಚಂಚೆಗಳು ಮುಖಸಂವಹನಗಳೂ ಸಂದೇಶಗಳೂ ನಮ್ಮನ್ನು ಆಪ್ತವಾಗಿಸುತ್ತಲಿವೆ. ವೈಜ್ಞಾನಿಕ ಬೆಳವಣಿಯಿಂದ ಇಂದು ಕಲಿತದ್ದು ಕೊಂಡದ್ದು ನಾಳೆ ಹಳತಾಗುತ್ತಲಿದೆ ಅಂತಯೇ ಸಾಹಿತ್ಯ ರಚನಾಕಾರರ ಮುಂದಯೂ ಸವಾಲಿದೆ ಆ ಸವಾಲನ್ನು ಎದುರಿಸಲು ನಮ್ಮ ಲೇಖಕರು ತಮ್ಮ ಚಿತ್ತವನ್ನು ಬದಲಾಯಿಸಬೇಕಾಗಿದೆ. ಬದಲಿಸಿದರೆ ಮಾತ್ರ ಬರವಣಿಗೆ ಹಿಡಿಯುತ್ತದೆ. ಇಲ್ಲದಿದ್ದರೆ ಅದನ್ನು ಹೊರಳಿ ನೋಡುವವರು ಇರುವುದಿಲ್ಲಾ.

ಕಾಲಕ್ಕೆ ತಕ್ಕಂತೆ ನಮ್ಮ ಮನೆಗಳು ಬದಲಾಗಿವೆ. ಪ್ರತಿಯೊಂದು ಮನೆಯಲ್ಲಿ ಅಷ್ಟೆ ಅಲ್ಲ ನಮ್ಮ ಜೇಬಿನಲ್ಲಿ ಕೈಯಲ್ಲಿ ವೈಜ್ಞಾನಿಕ ಉಪಕರಣಗಳು ಬಳಕೆಯಾಗುತ್ತಲಿವೆ. ಮೋಬೈಲ್ ಬಳಕೆಯನ್ನು ನೋಡಿ ಆದರೆ ಅದೇ ನಮ್ಮ ಮಕ್ಕಳು ಅದರ ಬಳಕೆಯ ಸ್ತಿತ್ವವನ್ನೇ ಜಾಲಾಡಿಬಿಡುತ್ತಾರೆ. ಕಾರಣ ಅವರ ಬುದ್ದಿಮತ್ತೆ, ವಯಸ್ಸು ಕಾಲದಲ್ಲಾದ ಪಲ್ಲಟ ಬಳಸಲು ಅರಿತುಕೊಂಡು ಅವರ ಕ್ರೀಯಾಶೀಲತೆ ಇಂದು ನಮ್ಮ ಮಕ್ಕಳ ನಮಗಿಂತಲೂ ಜಾಣರಾಗಿದ್ದಾರೆ. ಅಲೋಚನೆಯ ಹರಹು ನಮಗಿಂತಲೂ ಮುಂದಿದೆ.

ವೈಜ್ಞಾನಿಕ ಬೆಳವಣೆಗೆಯಿಂದಾಗಿ ಜಗತ್ತು ಓಡುತ್ತಿದೆ ಎಂದು ಹೇಳುತ್ತೇವೆ. ಆ ಓಟಕ್ಕೆ ನಾವೂ ಓಡಬೇಕು, ಅಂದರೆ ಮಾತ್ರ ಅಸ್ತಿತ್ವ ಉಳಿಯುತ್ತದೆ ಬದುಕು ಸರಾಗವಾಗುತ್ತದೆ. ಇಂದು ಅಂಚೆ ಬದಲಾಗಿ ಮಿಂಚಚೆ ಬಳಸುತ್ತಿದ್ದಾರೆ. ಪತ್ರಬರಹ ನಿಂತ ಹೋಗಿದೆ, ಪತ್ರಿಕೆಗಳನ್ನು ಮಿಂಚಚೆಯಲ್ಲೆ ಓದುಬಹುದು. ಲ್ಯಾಪ್‌ಟಾಪ್ ಬಳಕೆ ಸಾಮಾನ್ಯವಾಗತೊಡಗಿದೆ. ಪೆನ್ನು ಕಾಗದ ಬದಲಿಗೆ ಬೆರಳುಗಳೇ ಆಟವಾಡುತ್ತಿವೆ. ರೇಲ್ವೆ ಟಿಕೇಟ್‌ಗಳಾಗಿ ಸ್ಟೇಶನ್‌ಗೆ ಹೋಗಬೇಕಾಗಿಲ್ಲ ಮನೆಯಲ್ಲಿಂದಲೇ ಪಡೆದುಕೊಳ್ಳಲಾಗುತ್ತಿದೆ. ಟಿಕೇಟು ಬೇಕಾಗಿಲ್ಲ ನಮ್ಮ ಮೋಬೈಲ್‌ಗಳಿಗೆ ಸಂದೇಶ ಬಂದರೆ ಸಾಕು ಪ್ರಯಾಣ ಸುಗುಮ ಹಣದ ಚಲಾವಣಿಯ ಅಷ್ಟೆ ಇ– ಬ್ಯಾಂಕಿಗ ಮುಖಾಂತರ ಹಣದ ವಹಿವಾಟು ನಡೆಯುತ್ತಿದೆ.

ನಾವು ನೀವೆಲ್ಲಾ ಗೋಲಿ ಆಟ, ಗಜಗದಾಟ, ಬಳಿಚೂರಾಟ, ಕಡ್ಡಿಆಟ, ಹುಲಿಮನಿ ಆಟ, ಚಕ್ಕಾರದಾಟ, ಕಣ್ಣು ಮುಚ್ಚಾಟ, ದಪ್ಪೆ ದುಪ್ಪಿ, ಲಗೋರಿಆಟ, ಕಬ್ಬಡ್ಡಿ ಆಟ ಕಲಿತೇ ದೊಡ್ಡವರಾಗಿದ್ದೇವೆ ಅಲ್ಲವೇ? ಇವೆಲ್ಲವೂ ಇಂದು ನಮ್ಮ ಕಣ್ಮುಂದೆಯೇ ಮರೆಯಾಗಿ ಹೋಗಿವೆ. ಆದರೂ ಮತ್ತೊಂದು ರೂಪದಲ್ಲಿ ಚೆಸ್ ಆಟ, ಕಾಲ್ಚೆಂಡಿನಾಟ ಖೊಖೋ, ಕ್ರಿಕೇಟ್, ವ್ಹಾಲಿಬಾಲ್, ಥ್ರೋಬಾಳ್, ಡಿಸ್ಕೆ ಎಸೆತ್ ಮುಂತಾದವುಗಳು ಬಂದಿವೆ ಇಲ್ಲಿಯೋ ಮಗುವಿನ ವ್ಯಕ್ತಿತ್ವ ವಿಕಸನಕ್ಕೆ ಅವಕಾಶವಿದೆ. ಕಾಲಕ್ಕೆ ತಕ್ಕಂತೆ ಬದಲಾವಣೆಯಾಗುವುದು ಸಹಜ. ಅದಕ್ಕೆ ನಾವು ಒಗ್ಗಿಕೊಂಡಂತೆ ಸಾಹಿತ್ಯ ರಚನೆಯಲ್ಲೂ ಕೊಡ ಪ್ರಾವಿಣ್ಯತೆಯನ್ನು ಪಡೆಯಬಹುದು. ನಾವು ನೀವು ಬರೆಯುತ್ತಿರುವ ಓದುತ್ತಿರುವ ಮಕ್ಕಳ ಸಾಹಿತ್ಯಕ್ಕೆ ನೂರು ವರುಷಗಳು ಅಷ್ಟೆ ಐದಾರೂ ವರ್ಷಗಳಿಂದ ಹದಿನಾಲ್ಕು ವರ್ಷಗಳ ಒಳಗಿನ ಮಕ್ಕಳಿಗೆ ರಚಿಸಿದ ಸಾಹಿತ್ಯ ಮಕ್ಕಳ ಸಾಹಿತ್ಯವೆಂದು 'ಮಕ್ಕಳ ಸಾಹಿತ್ಯವನ್ನು ಭಾವನಾತ್ಮಕವಾಗಿ ಬರೆಯದೆ ಪರಿಚಯಾತ್ಮಕವಾಗಿದ್ದರೆ ಅಷ್ಟೆ ಸಾಕು ' ಎಂದು ಲೇಖಕರೊಬ್ಬರು ಹೇಳುತ್ತಾರೆ ಈ ನಿಟ್ಟಿನಲ್ಲಿ ಸರಳವಾಗಿ ಮಕ್ಕಳಿಗೆ ತಿಳಿಯುವಂತೆ ಹೇಳುಲು ಲೇಖಕರಾದವರು ಪ್ರಯತ್ನಿಸಬೇಕು ಎಂಬುವು ನಮ್ಮ ಅಂಬೋಣವಾಗಿದೆ.

**ಪರಾಮರ್ಶನ ಗ್ರಂಥಗಳು:**


1. ಶಾಲೆಗಿಂತ ಚೀಲ ಭಾರ– ಶ್ರೀ "ಸಿಸು"ಸಂಗಮೇಶ
2. ನಾವು ನಾಳೆಯ ರವಿಗಳು– ಶ್ರೀ "ಸಿಸು"ಸಂಗಮೇಶ
3. ಕನ್ನಡ ಶಾಸನಗಳಲ್ಲಿ ಸಾಂಸ್ಕೃತಿಕ ಅಧ್ಯಯನ– ಡಾ. ಎಂ. ಚಿದಾನಂದ ಮೂರ್ತಿ